Q.P. Code – 50350

ತೃತೀಯ ಬಿ.ಎ. ಪದವಿ ಪರೀಕ್ಷೆ

ಸೆಪ್ಟೆಂಬರ್/ಅಕ್ಟೋಬರ್ 2013

(ದೂರ ಶಿಕ್ಷಣ)

(ಹೊಸಬರಿಗೆ/ಹಳಬರಿಗೆ)

# ಬಸವ ತತ್ವ

## (DAC 550) ಪತ್ರಿಕೆ Ⅺ – ಶರಣರ ಆಂದೋಲನಗಳು ಹಾಗೂ ಹೊಸ ಸಮಾಜದ ಪರಿಕಲ್ಪನೆ

*ಸಮಯ : 3 ಗಂಟೆಗಳು]* *[ಗರಿಷ್ಟ ಅಂಕಗಳು : 70/80*

***ಸೂಚನೆಗಳು :*** *1) **30** ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು **70** ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*2) **20** ಅಂಕಗಳ ಆಂತರಿಕ ಪದ್ಧತಿಯಲ್ಲಿ ಬರೆದ ವಿದ್ಯಾರ್ಥಿಗಳು **80** ಅಂಕಗಳ ಪ್ರಶ್ನೆಗಳಿಗೆ ಉತ್ತರಿಸುವುದು.*

*3) ವಿಶೇಷ ಸೂಚನೆ : ಹೊಸಬರು **ಡಿ**-ವಿಭಾಗದ ಪ್ರಶ್ನೆಯನ್ನು ಕಡ್ಡಾಯವಾಗಿ ಉತ್ತರಿಸಬೇಕು.*

ವಿಭಾಗ – ಎ

1. ಯಾವುದಾದರೂ **ಎರಡು** ವಚನಗಳನ್ನು ವಿಶ್ಲೇಷಿಸಿ : **2 × 5 = 10**

(ಅ) ಹೊಲೆಯ, ಮಾದಿಗ ಭಕ್ತನಾದರೆ
ಆತನ ಮನೆಯ ಸೊಣಗಂಗೆ
ಪಂಚ ಮಹಾವಾದ್ಯದಲ್ಲಿ ಸನ್ಮಾನದ ಮಾಡೆನೆ?
ನೆಲಲನುಗ್ಗಡಿವೆ ಉಘೇ ಚಾಂಗು, ಭಲರೆ ಎಂದು;
ಕುಲದಧಿಕ ಹಾರುವರಿಗೆ ಸಿದ್ಧಿಗೆಯ್ಯೆಸಲೇ,
ನಿಮ್ಮ ಶರಣರ ಮಹಿಮೆ ಘನಕ್ಕೆ ಘನಃ
ಎಲೆ ಕೂಡಲ ಸಂಗಮದೇವಾ, ನಿಮ್ಮ ನಂಬದವ ಹೊಲೆಯ.

(ಆ) "ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ,
ಲಿಂಗದ ಮೇಲೆ ನಿಷ್ಟೆ ಇಲ್ಲದ ಭಕ್ತ
ಇದ್ದರೇನೋ ಶಿವಶಿವ ಹೋದರೇನೋ!
ಕೂಡಲ ಸಂಗಮ ದೇವಯ್ಯ
ಊಡದ ಆವಿಂಗೆ ಉಣ್ಣದ ಕರುವ ಬಿಟ್ಟಂತೆ".

(ಇ) "ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರು ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ".

ವಿಭಾಗ – ಬಿ

2. ಯಾವುದಾದರೂ **ನಾಲ್ಕಕ್ಕೆ** ಉತ್ತರಿಸಿ : **4 × 10 = 40**

(ಅ) ಕ್ರಾಂತಿ ಮತ್ತು ಅಂದೋಲನದಿಂದ ಸಾಮಾಜಿಕ ಪರಿವರ್ತನೆ ಆಗಿದೆಯೆ? ಉದಾಹರಣೆಯೊಂದಿಗೆ ವಿವರಿಸಿ.

(ಆ) ಜಾತಿರಹಿತ ಸಮಾಜವನ್ನು ಕಟ್ಟುವಲ್ಲಿ ಬಸವಣ್ಣನ ಪ್ರಯತ್ನ ಇಂದಿಗೂ ಮಾದರಿಯಾಗಿದೆ ಎಂಬುದನ್ನು ಉದಾಹರಣೆ ಸಹಿತ ವಿವರಿಸಿ.

(ಇ) ಪ್ಲೇಟೊವಿನ ಆದರ್ಶ ರಾಜ್ಯದ ಕನಸನ್ನು ವಿವರಿಸಿ.

(ಈ) ಬಸವಣ್ಣ ಮತ್ತು ಶರಣೆಯರು ಜಾತಿಯ ಬೇರನ್ನೇ ಹೇಗೆ ಅಲುಗಾಡಿಸಿದ್ದಾರೆ? ವಿವರಿಸಿ.

(ಉ) "ಕಾಯಕದಲ್ಲಿ ನಿರತನಾದರೆ ಲಿಂಗ ಮುಂದಿದ್ದರೂ ಹಂಗು ಹರಿಯಬೇಕು" ಶರಣರ ಈ ಮಾತನ್ನು ವಿಸ್ತರಿಸಿ ಬರೆಯಿರಿ.

ವಿಭಾಗ – ಸಿ

3. ಯಾವುದಾದರೂ **ನಾಲ್ಕು** ಪ್ರಶ್ನೆಗಳಿಗೆ ಉತ್ತರಿಸಿ : **4 × 5 = 20**

(ಅ) ಮಹಾವೀರನ ಅಂದೋಲನ

(ಆ) ಮೂಢ ನಂಬಿಕೆಗಳು ಮತ್ತು ಶಿವಶರಣರು

(ಇ) ರಾಜಕೀಯ ಅಂದೋಲನ

(ಈ) ಕಾಯಕ ನಿಷ್ಠೆ

(ಉ) ಕಾಯಕ ಪ್ರಜ್ಞೆ

ವಿಭಾಗ – ಡಿ

4. ವಿಶೇಷ ಸೂಚನೆ : ಹೊಸಬರು ಈ ಪ್ರಶ್ನೆಯನ್ನು **ಕಡ್ಡಾಯವಾಗಿ** ಉತ್ತರಿಸಬೇಕು : **1 × 10 = 10**

(ಅ) ಬಸವ ಹಾಗೂ ಅಲ್ಲಮನ ಚಿಂತನೆಗಳ ನಡುವಿನ ಹೋಲಿಕೆ ಹಾಗೂ ವ್ಯತ್ಯಾಸಗಳನ್ನು ತಿಳಿಸಿರಿ.

---